**ಕರ್ನಾಟಕ ಸರ್ಕಾರ**
**ರಾಷ್ಟ್ರೀಯ ಸೇವಾ ಯೋಜನೆ**

ಸಂಖ್ಯೆ:ರಾಸೇಯೋ:ಪಪೂಶಿಇ:ಗಾಂ.ನಿ.:53/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:22.09.2016

ಗೆ,
ಪ್ರಾಂಶುಪಾಲರು
---------
---------

ಮಾನ್ಯರೆ,

ವಿಷಯ:- ಗಾಂಧೀ ಜಯಂತಿ ಪ್ರಯುಕ್ತ ಸದ್ಭಾವನ ಯಾತ್ರೆ ಕಾರ್ಯಕ್ರಮವನ್ನು ಏರ್ಪಡಿಸಿದ್ದು ರಾ.ಸೇಯೋ. ಸ್ವಯಂ ಸೇವಕರನ್ನು ಮತ್ತು ಕಾರ್ಯಕ್ರಮಾಧಿಕಾರಿಗಳನ್ನು ನಿಯೋಜನೆ ಮಾಡುವ ಬಗ್ಗೆ.

ಉಲ್ಲೇಖ: 1. ರಾಜ್ಯ ಸಂಪರ್ಕಾಧಿಕಾರಿಗಳ ಪತ್ರ ಸಂಖ್ಯೆ ಯು.ಸೇ.ಇ/ರಾಸೇಯೋ/10/2016-17/192/ ದಿ: 21-09-2016.

2. ಗಾಂಧೀ ಭವನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ), ಕುಮಾರ ಪಾರ್ಕ್ ಪೂರ್ವ ಬೆಂಗಳೂರು ಇವರ ಪತ್ರ ಸಂಖ್ಯೆ ಕೆಜಿಎಸ್ಎನ್/0909/2015-16/0198/ದಿ: 08-09-2016

ಮೇಲ್ಕಂಡ ವಿಷಯ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ 02/10/2016 ರಂದು ಗಾಂಧೀ ಭವನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ) ಕುಮಾರ ಪಾರ್ಕ್ ಪೂರ್ವ, ಬೆಂಗಳೂರು ಇವರ ಸಹಯೋಗದಲ್ಲಿ ಗಾಂಧೀ ಜಯಂತಿ ಅಂಗವಾಗಿ ಸದ್ಭಾವನ ಯಾತ್ರೆ ಮತ್ತು ಗಾಂಧೀ ಜಯಂತಿ ಕಾರ್ಯಕ್ರಮವನ್ನು ಆನಂದರಾವ್ ವೃತ್ತದಿಂದ ಗಾಂಧೀ ಭವನದವರೆಗೆ ನಡಿಗೆ ಜಾಥ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಗಣ್ಯರು ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಸದರಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಹಾಗೂ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ.

ಆದುದರಿಂದ ದಿನಾಂಕ 02/10/2016 ರಂದು ಬೆಳಗ್ಗೆ 8.30 ಕ್ಕೆ ಆನಂದರಾವ್ ವೃತ್ತ ಗಾಂಧೀ ಪ್ರತಿಮೆ ಹತ್ತಿರ ಹಾಜರಿರುವಂತೆ ಸೂಚಿಸಿ ತಮ್ಮ ಕಾಲೇಜಿನಿಂದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು ಮತ್ತು ಎನ್.ಎಸ್.ಎಸ್. ಸ್ವಯಂ ಸೇವಕರನ್ನು/ಸ್ವಯಂಸೇವಕಿಯರನ್ನು ನಿಯೋಜನೆ ಮಾಡಲು ಕೋರಿದೆ. ಸದರಿ ಕಾರ್ಯಕ್ರಮಕ್ಕೆ ಕಾರ್ಯಕ್ರಮಾಧಿಕಾರಿಗಳು /ಸ್ವಯಂಸೇವಕರು ಬಿಳಿ ವಸ್ತ್ರಧಾರಿಯಾಗಿ ಭಾಗವಹಿಸಲು ಸೂಚಿಸಿದೆ.

ಲಘು ಉಪಾಹಾರ ವ್ಯವಸ್ಥೆ ಮತ್ತು ಬಿಳಿ ಟೋಪಿಯನ್ನು ಒದಗಿಸಲಾಗುವುದು ಮತ್ತು ಹೋಗಿ ಬರುವ ಪ್ರಯಾಣದ ಭತ್ಯೆಯನ್ನು ಎನ್.ಎಸ್.ಎಸ್. ದೈನಂದಿನ ಚಟುವಟಿಕೆಗಳ ಅನುದಾನದಲ್ಲಿ ಭರಿಸುವುದು. ಈ ಕೆಳಕಂಡ ಕಾಲೇಜಿನ ಪ್ರಾಂಶುಪಾಲರು ಕಡ್ಡಾಯವಾಗಿ ವಿದ್ಯಾರ್ಥಿಗಳನ್ನು/ಕಾರ್ಯಕ್ರಮಾಧಿಕಾರಿಯನ್ನು ನಿಯೋಜಿಸಲು ಕೋರಿದೆ.

| Sl No | College | Volunteers |
|---|---|---|
| 1. | BBMP PU COLLEGE FOR GIRLS, SRIRAMPURA,BANGALORE - 21 | 25 |
| 2. | Govt PU College for Girls 13th Cross Malleshwaram, Bangalore | 25 |
| 3. | Hombegowda PU College Mariyappana Palya, Bangalore | 25 |
| 4. | BES PU College, Malleshwaram, 11th Cross Bangalore | 25 |

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು.

ಪ್ರತಿಗಳು:

1. ಸಹಾಯಕ ನಿರ್ದೇಶಕರು ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ